ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ.ಎಂ.ಎಲ್.ಅನಿಲ್ ಕುಮಾರ್ ಇವರು ನಿಯಮ-330 ರಡಿಯಲ್ಲಿ "ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಕಾಡಂಚಿನ ಹಲವಾರು ಗ್ರಾಮಗಳಲ್ಲಿ ಕಾಡುಪ್ರಾಣಿಗಳಾದ ಜಿಂಕೆ, ಕಾಡುಹಂದಿ, ಆನೆ ಮುಂತಾದ ಪ್ರಾಣಿಗಳಿಂದ ಸಾಕಷ್ಟು ಬೆಳೆ ನಷ್ಟವಾಗುತ್ತಿದೆ ಇದರ ಜೊತೆಗೆ ಕೆಲವೊಮ್ಮೆ ಸಾರ್ವಜನಿಕರ ಮೇಲೆ ಕಾಡುಪ್ರಾಣಿಗಳಿಂದ ದಾಳಿಗಳಾಗುತ್ತಿದ್ದು ಕಾಡಂಚಿನ ಗ್ರಾಮಸ್ಥರು ಭಯಭೀತಿಯಿಂದ ಜೀವನ ನಡೆಸುತ್ತಿದ್ದು, ಕಾಡುಪ್ರಾಣಿಗಳ ಉಪಟಳವನ್ನು ನಿಯಂತ್ರಿಸುವ ಕುರಿತು ಸಾರ್ವಜನಿಕರು ಅರಣ್ಯ ಇಲಾಖೆಗೆ ದೂರುಗಳನ್ನು ನೀಡುತ್ತಿದ್ದರು ಸಹ ಯಾವುದೇ ಪರಿಹಾರಗಳು ದೊರೆತಿರುವುದಿಲ್ಲ. ಇದೊಂದು ಗಂಭೀರವಾಗಿ ಸಾರ್ವಜನಿಕ ಮಹತ್ವದ ವಿಚಾರವಾಗಿರುವುದರಿಂದ ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲೆಯ ಕಾಡಂಚಿನ ಗ್ರಾಮಗಳಲ್ಲಿ ಕಾಡುಪ್ರಾಣಿಗಳ ಉಪಟಳವನ್ನು ನಿಯಂತ್ರಿಸುವ ಬಗ್ಗೆ" ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಅರಣ್ಯ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರ ಹೇಳಿಕೆ.

******

ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಕಾಡಂಚಿನ ಹಲವಾರು ಗ್ರಾಮಗಳಲ್ಲಿ ವನ್ಯಪ್ರಾಣಿಗಳ ಹಾವಳಿ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾದ ಹಾನಿಗಳ ವಿವರ ಹಾಗೂ ಮಾನವ ಪ್ರಾಣ ಹಾನಿ, ಮಾನವ ಗಾಯ, ಬೆಳೆಹಾನಿ ಮತ್ತು ಸಾಕುಪ್ರಾಣಿ ಹತ್ಯೆ ಪ್ರಕರಣಗಳಿಗೆ ನಿಯಮಾನುಸಾರ ಪಾವತಿಸಲಾದ ದಯಾತ್ಮಕ ಧನದ ವಿವರ ಈ ಕೆಳಕಂಡಂತಿದೆ:-

(ರೂ.ಗಳಲ್ಲಿ)

| ವಿಭಾಗ | ಬೆಳೆಹಾನಿ | | ಸಾಕುಪ್ರಾಣಿ ಹತ್ಯೆ | | ಮಾನವ ಪ್ರಾಣ ಹಾನಿ | | ಮಾನವ ಗಾಯ | | ಒಟ್ಟು | |
|---|---|---|---|---|---|---|---|---|---|---|
| | ಪ್ರಕರಣ | ಮೊತ್ತ | ಪ್ರಕರಣ | ಮೊತ್ತ | ಪ್ರಕರಣ | ಮೊತ್ತ | ಪ್ರಕರಣ | ಮೊತ್ತ | ಪ್ರಕರಣ | ಮೊತ್ತ |
| 1 | 2 | 3 | 4 | 5 | 6 | 7 | 8 | 9 | 10 | 11 |
| **2019-20** | | | | | | | | | | |
| ಚಿಕ್ಕಬಳ್ಳಾಪುರ | 12 | 1,45,940/- | 6 | 50,000/- | 0 | 0 | 0 | 0 | **18** | **1,95,940/-** |
| ಕೋಲಾರ | 1488 | 52,96,000/- | 22 | 4,55,900/- | 4 | 30,00,000/- | 2 | 628000/- | **1516** | **93,79,900/-** |
| **ಒಟ್ಟು** | **1500** | **54,41,940/-** | **28** | **5,05,900/-** | **4** | **30,00,000/-** | **2** | **6,28,000/-** | **1534** | **95,75,840/-** |
| **2020-21** | | | | | | | | | | |
| ಚಿಕ್ಕಬಳ್ಳಾಪುರ | 15 | 98,691/- | 31 | 5,85,000/- | 0 | 0 | 1 | 30,000/- | **47** | **7,13,691/-** |
| ಕೋಲಾರ | 1275 | 48,50,000/- | 0 | 0 | 3 | 22,50,000/- | 0 | 0 | **1278** | **71,00,000/-** |
| **ಒಟ್ಟು** | **1290** | **49,48,691/-** | **31** | **5,85,000/-** | **3** | **22,50,000/-** | **1** | **30,000/-** | **1325** | **78,13,691/-** |
| **2021-22** | | | | | | | | | | |
| ಚಿಕ್ಕಬಳ್ಳಾಪುರ | 25 | 2,23,650/- | 50 | 3,10,000/- | 0 | 0 | 0 | 0 | **75** | **5,33,650/-** |
| ಕೋಲಾರ | 671 | 69,15,400/- | 5 | 25,000/- | 3 | 22,50,000/- | 0 | 0 | **679** | **91,90,400/-** |
| **ಒಟ್ಟು** | **696** | **71,39,050/-** | **55** | **3,35,000/-** | **3** | **22,50,000/-** | **0** | **0** | **754** | **97,24,050/-** |

---2

ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಮಾನವ ಹಾನಿ ಪ್ರಕರಣಗಳಲ್ಲಿ ಸರ್ಕಾರದ ಆದೇಶ ಸಂಖ್ಯೆ: ಅಪಜೀ-66-ಎಫ್ ಡಬ್ಲ್ಯೂಎಲ್-2019, ದಿನಾಂಕ: 7/1/2020 ರನ್ವಯ ರೂ.7.50 ಲಕ್ಷಗಳ ದಯಾತ್ಮಕ ಧನವನ್ನು ನಿಯಮಾನುಸಾರ ಪರಿಶೀಲಿಸಿ ಪಾವತಿಸಲು ಅವಕಾಶವಿದ್ದು, ಅದರಂತೆ ಘಟನೆ ನಡೆದ ಕೂಡಲೇ ರೂ.2.00 ಲಕ್ಷಗಳನ್ನು ಮೃತರ ವಾರಸುದಾರರಿಗೆ ಪಾವತಿಸಲಾಗುತ್ತಿದೆ. ಉಳಿದ ಮೊತ್ತ ರೂ.5.50 ಲಕ್ಷಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಹಂತದಲ್ಲಿ ವಿಚಾರಣೆ ನಡೆಸಿ, ಅಗತ್ಯವಿರುವ ಎಲ್ಲಾ ಅಧಿಕೃತ ದಾಖಲೆಗಳನ್ನು ಪಡೆದುಕೊಂಡು, ಅವುಗಳನ್ನು ಪರಿಶೀಲಿಸಿ ಕಾನೂನುಬದ್ಧವಾಗಿ ವಾರಸುದಾರರಿಗೆ ಬಿಡುಗಡೆ ಮಾಡಲಾಗುತ್ತದೆ. ಅಲ್ಲದೇ, ಸರ್ಕಾರದ ಆದೇಶ ಸಂಖ್ಯೆ. ಅಪಜೀ- 61-ಎಫ್ಎಪಿ-2018 ದಿನಾಂಕ: 16-10-2018 ರಂತೆ ಮೃತರ ಕುಟುಂಬದ ವಾರಸುದಾರರಿಗೆ ಹಾಗೂ ಶಾಶ್ವತ ಅಂಗವಿಕಲತೆ ಪ್ರಕರಣಗಳಲ್ಲಿ ಸಂತ್ರಸ್ತರಿಗೆ 05 ವರ್ಷಗಳವರೆಗೆ ಪ್ರತಿ ತಿಂಗಳಿಗೆ ರೂ. 2,000/-ಗಳ ಮಾಸಾಶನವನ್ನು ಸಹ ನೀಡಲಾಗುತ್ತಿದೆ.

ಸರ್ಕಾರದ ಆದೇಶ ಸಂಖ್ಯೆ: ಅಪಜೀ-130-ಎಫ್ ಡಬ್ಲ್ಯೂಎಲ್-2016, ದಿನಾಂಕ: 19/09/2016ರ ಪ್ರಕಾರ ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಶಾಶ್ವತ ಅಂಗವಿಕಲತೆ ಪ್ರಕರಣಗಳಿಗೆ ರೂ.5.00 ಲಕ್ಷಗಳನ್ನು, ಭಾಗಶಃ ಅಂಗವಿಕಲತೆ ಪ್ರಕರಣಗಳಿಗೆ ರೂ.2.50 ಲಕ್ಷಗಳನ್ನು ಹಾಗೂ ಗಾಯಗೊಂಡ ವ್ಯಕ್ತಿಗೆ ಗರಿಷ್ಠ ರೂ. 30,000/-ಗಳ ಪರಿಹಾರ ಧನವನ್ನು ಪಾವತಿಸಲಾಗುತ್ತಿದೆ.

ಮಾನವ ಗಾಯ / ಭಾಗಶಃ ಅಂಗವಿಕಲತೆ / ಶಾಶ್ವತ ಅಂಗವಿಕಲತೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ ಎಫ್ಇಇ 128 ಎಫ್‌ಡಬ್ಲ್ಯೂಎಲ್ 2013 ದಿನಾಂಕ: 15-09-2015 ರನ್ವಯ ದಯಾತ್ಮಕ ಧನದ ಜೊತೆಗೆ ವೈದ್ಯಕೀಯ ವೆಚ್ಚವನ್ನು ಸಿ.ಜಿ.ಹೆಚ್.ಎಸ್. ದರಗಳಿಗೆ ಮಿತಿಗೊಳಿಸಿ ಪಾವತಿಸಲಾಗುತ್ತದೆ.

ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಬೆಳೆಹಾನಿ ಪ್ರಕರಣಗಳಲ್ಲಿ ಸರ್ಕಾರದ ಆದೇಶ ಸಂಖ್ಯೆ ಅಪಜೀ-130-ಎಫ್‌ಡಬ್ಲುಎಲ್ -2016 ದಿನಾಂಕ: 19/09/2016 ರಲ್ಲಿ ನಿಗಧಿಪಡಿಸಿದ ದರಗಳನ್ವಯ ಪರಿಹಾರ ಧನವನ್ನು ಪಾವತಿಸಲಾಗುತ್ತಿದೆ.

ಇತ್ತೀಚಿನ ದಿನಗಳಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಬೆಳೆ ಹಾನಿ ಪ್ರಕರಣಗಳಿಗೆ 'ಇ-ಪರಿಹಾರ' ತಂತ್ರಾಂಶದ ಮೂಲಕ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದ್ದು, ಸರ್ಕಾರದ ನಿಯಮಾನುಸಾರ ಪರಿಶೀಲಿಸಿ, ಶೀಘ್ರವೇ ನೇರವಾಗಿ ಸಂತ್ರಸ್ತರ ಖಾತೆಗೆ ಪಾವತಿಸುವ ಪ್ರಕ್ರಿಯೆಯನ್ನು ಇ-ಪರಿಹಾರ ತಂತ್ರಾಂಶದ ಮೂಲಕ ನಿರ್ವಹಿಸಲಾಗುತ್ತಿದೆ.

ವನ್ಯಪ್ರಾಣಿಗಳ ಹಾವಳಿ ತಡೆಗಟ್ಟಲು ಅರಣ್ಯ ಇಲಾಖಾ ವತಿಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

- 2020-21ನೇ ಸಾಲಿನಲ್ಲಿ ಮಾಲೂರು ಮತ್ತು ಬಂಗಾರಪೇಟೆ ವ್ಯಾಪ್ತಿಯ ಕಾಮಸಂದ್ರ ವನ್ಯಜೀವಿಧಾಮದ ಗಡಿಯ ತೊಪ್ಪನಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ 5.4 ಕಿ.ಮೀ ಸೋಲಾರ್ ಫೆನ್ಸಿಂಗ್ ಕಾಮಗಾರಿ ಕೈಗೊಳ್ಳಲಾಗಿದೆ.

- 2021-22ನೇ ಸಾಲಿನಲ್ಲಿ ಬಂಗಾರಪೇಟೆ ವಲಯ ವ್ಯಾಪ್ತಿಯಲ್ಲಿ 14.85 ಕಿ.ಮೀ ಮತ್ತು ಮಾಲೂರು ವಲಯ ವ್ಯಾಪ್ತಿಯಲ್ಲಿ 12 ಕಿ.ಮೀ ಸೋಲಾರ್ ಫೆನ್ಸಿಂಗ್ ಕಾಮಗಾರಿ ಪ್ರಗತಿಯಲ್ಲಿದೆ.

- ಕಾಡಾನೆಗಳ ಹಾವಳಿಯಿಂದ ಶಾಶ್ವತ ಪರಿಹಾರ ಕೈಗೊಳ್ಳಲು ವ್ಯಾಪ್ತಿಯ ಚುನಾಯಿತ ಪ್ರತಿನಿಧಿಗಳು ನಿರ್ದೇಶನ ನೀಡಿದ ಮೇರೆಗೆ ತುರ್ತು ಅಗತ್ಯತೆಗಾಗಿ ಕಾಮಸಂದ್ರ ವನ್ಯಜೀವಿಧಾಮಕ್ಕೆ ಕಾಡಾನೆಗಳು ಪ್ರವೇಶಿಸುವ ಆಯಕಟ್ಟಿನ ಸ್ಥಳಗಳಲ್ಲಿ 55 ಕಿ.ಮೀ ವ್ಯಾಪ್ತಿಯಲ್ಲಿ ಸೋಲಾರ್ ಹ್ಯಾಂಗಿಂಗ್ ಫೆನ್ಸ್ ಅಳವಡಿಸಲು ಉದ್ದೇಶಿಸಲಾಗಿದೆ.

- ಬಂಗಾರಪೇಟೆ ಮತ್ತು ಮಾಲೂರು ವಲಯ ವ್ಯಾಪ್ತಿಯ ಕಾಮಸಂದ್ರ ವನ್ಯಜೀವಿಧಾಮ ಪ್ರದೇಶಕ್ಕೆ ಹೊಂದಿಕೊಂಡಿರುವ ತಮಿಳುನಾಡು ಮತ್ತು ಆಂದ್ರ ಪ್ರದೇಶದ ಅರಣ್ಯ ಗಡಿಭಾಗಗಳಿಂದ ಕಾಡಾನೆಗಳು ವಲಸೆ ಬಂದು ರೈತರ ಜಮೀನುಗಳಿಗೆ ನುಗ್ಗಿ ಸಾರ್ವಜನಿಕ ಆಸ್ತಿ ಪಾಸ್ತಿ ನಷ್ಟಪಡಿಸುತ್ತಿರುವುದನ್ನು ಹಾಗೂ ಪ್ರಾಣ ಹಾನಿ ತಪ್ಪಿಸುವ ಶಾಶ್ವತ ಪರಿಹಾರಕ್ಕಾಗಿ ಸುಮಾರು 58ಕಿ.ಮೀ ಉದ್ದ ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಕಾಮಗಾರಿ ಬೇಡಿಕೆ ಇದ್ದು ಅನುದಾನ ಲಭ್ಯತೆಗೆ ಅನುಗುಣವಾಗಿ ಕಾಮಗಾರಿಯನ್ನು ನಿಯಮಾನುಸಾರ ಕೈಗೊಳ್ಳಲಾಗುವುದು. .

- ಚಿಕ್ಕಬಳ್ಳಾಪುರ ವಿಭಾಗದಲ್ಲಿ ಕಾಡಿನಿಂದ ಪ್ರಾಣಿಗಳು ಬರದಂತೆ ಕಾಡಿನ ಗಡಿಗಳಲ್ಲಿ ತಂತಿ ಬೇಲಿ / ಕಾಂಪೌಂಡ್ ಗೋಡೆ ನಿರ್ಮಾಣ ಮಾಡಲಾಗುತ್ತಿದೆ. ಕಾಡು ಪ್ರಾಣಿಗಳು ನೀರಿಗಾಗಿ ಅರಣ್ಯ ಪ್ರದೇಶದಿಂದ ಹೊರ ಬರದಂತೆ ಕೆರೆ ಹೂಳೆತ್ತುವಿಕೆ, ಸಿಮೆಂಟ್ ವಾಟರ್ ಹೋಲ್ಸ್ ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಮುಂದುವರೆದು, ವನ್ಯಪ್ರಾಣಿಗಳ ಹಾವಳಿ ಒಳಗೊಂಡಂತೆ ಅರಣ್ಯ ಇಲಾಖೆಗೆ ಸಂಬಂಧಪಟ್ಟ ಇತರೆ ದೂರುಗಳನ್ನು 1926 ಐ.ವಿ.ಆರ್.ಎಸ್ ಅರಣ್ಯ ಸಹಾಯವಾಣಿ ಟೋಲ್ ಫ್ರೀ ನಂಬರ್‌ಗೆ ಸಾರ್ವಜನಿಕರು ದೂರವಾಣಿ ಮುಖಾಂತರ ಕರೆಮಾಡಿ ದಾಖಲಿಸಬಹುದಾಗಿದ್ದು, ದಾಖಲಿಸಲಾದ ದೂರಿನ ವಿವರಗಳನ್ನು ಸಂಬಂಧಿಸಿದ ವಲಯ ಅರಣ್ಯಾಧಿಕಾರಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ರವರುಗಳಿಗೆ ಎಸ್.ಎಂ.ಎಸ್ ಮೂಲಕ ಸಹಾಯವಾಣಿ ಕೇಂದ್ರದಿಂದ ರವಾನಿಸಲಾಗುತ್ತದೆ. ಈ ರೀತಿ ದೂರು ರವಾನಿಸಿದ ನಂತರ ಸಂಬಂಧಿಸಿದ ವಲಯ ಅರಣ್ಯಾಧಿಕಾರಿಗಳಿಗೆ ದೂರಿನ ಬಗ್ಗೆ ಕ್ರಮ ಕೈಗೊಳ್ಳುವಂತೆ ದೂರವಾಣಿ ಕರೆಯ ಮುಖಾಂತರ ತಿಳಿಸಲಾಗುತ್ತದೆ. ನಂತರ ಸದರಿ ದೂರಿನ ಕುರಿತು ಕೈಗೊಂಡ ಕ್ರಮದ ಬಗ್ಗೆ ವಲಯ ಅರಣ್ಯಾಧಿಕಾರಿಗಳು ಸಹಾಯ ವಾಣಿ ಕೇಂದ್ರದ ವೆಬ್‌ಸೈಟ್‌ನಲ್ಲಿ ನಮೂದಿಸಿ ದೂರನ್ನು ಮುಕ್ತಾಯಗೊಳಿಸುತ್ತಾರೆ.

ಸಂಖ್ಯೆ: ಅಪಜೀ 77 ಎಫ್‌ಡಬ್ಲ್ಯೂಎಲ್ 2022

(ಉಮೇಶ್ ವಿ.ಕತ್ತಿ)
ಅರಣ್ಯ, ಆಹಾರ, ನಾಗರಿಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು